O.S .No. 494/2015
DW-1

ದಿನಾಂಕ: 06.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ವಾದಿ ಪರ ಶ್ರೀ ಎಸ್.ಹೆಚ್.ಎಲ್. ವಕೀಲರಿಂದಃ</u>

ವಾದಿ ನಿಮ್ಮ ಅಕ್ಕ ಎಂದರೆ ಸರಿ. 1 ನೇ ಪ್ರತಿವಾದಿ ನಿಮ್ಮ ತಂದೆ ಎಂದರೆ ಸರಿ. ಮೃತ ಕಾಳಮ್ಮ ನಿಮ್ಮ ತಾಯಿ ಎಂದರೆ ಸರಿ. ನಮ್ಮ ತಂದೆ-ತಾಯಿಗೆ 5 ಜನ ಮಕ್ಕಳು. ಸದರಿಯವರೆಂದರೆ ಮಹಾದೇವಮ್ಮ, ರೇಣುಕಾ, ನಾಗಮ್ಮ, ಕುಮಾರ ಮತ್ತು ಲೀಲಾವತಿ. ದಾವಾ ಆಸ್ತಿಗಳು ನಿಮ್ಮ ತಾತನಿಂದ ನಿಮ್ಮ ತಂದೆಗೆ ಬಂದಂತಹ ಆಸ್ತಿಗಳು ಎಂದರೆ ಸರಿ. ನಿಮ್ಮ ಕುಟುಂಬದಲ್ಲಿ ವಾದಿಯವರಾಗಲೀ, ನೀವಾಗಲೀ ದಾವಾ ಆಸ್ತಿಗಳಲ್ಲಿ ಯಾವುದೇ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ವಾದಿಗೆ ದಾವಾ ಆಸ್ತಿಯಾಗಲೀ ಹಾಗೂ ಇತರ ಆಸ್ತಿಗಳಾಗಲೀ ಯಾವುದನ್ನು ಭಾಗ ಕೊಟ್ಟಿಲ್ಲ ಎಂದರೆ ಸರಿ.

ದಾವಾ ತಪಶೀಲು ಆಸ್ತಿ ಸಂ.1 ನ್ನು 1 ನೇ ಪ್ರತಿವಾದಿ ಅಶ್ವಥ ನಾರಾಯಣ ರವರಿಗೆ ಕ್ರಯ ಮಾಡಿರುವ ಬಗ್ಗೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ನಿಮಗೆಷ್ಟು ಭಾಗದ ಹಕ್ಕು ಇದೆಯೋ ಅಷ್ಟೇ ಹಕ್ಕು ವಾದಿಗೆ ಇದೆ ಎಂದರೆ ಸರಿ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.